## ಕಾರ್ಯ ಚಟುವಟಿಕೆಗಳು :

1. ಮಕ್ಕಳ ಹಕ್ಕುಗಳ ಬಗ್ಗೆ ಅರಿವಿನ ಕಾರ್ಯಕ್ರಮವನ್ನು ಶಾಲಾ ಮಟ್ಟದಲ್ಲಿ ಮತ್ತು ಸಮುದಾಯ ಮಟ್ಟದಲ್ಲಿ ನಡೆಸುವುದು ಹಾಗೂ ನಿರಂತರವಾಗಿ ಈ ಕಾರ್ಯಕ್ರಮಗಳನ್ನು ಮುಂದುವರೆಸುವುದು.
2. ಮಕ್ಕಳು ಶಾಲೆ ಬಿಡದಂತೆ ಮನವೊಲಿಸುವುದು ಮತ್ತು ಶಾಲೆ ಬಿಟ್ಟ ಮಕ್ಕಳ ಮರಳಿ ಶಾಲೆಗೆ ಬರುವಂತೆ ನೋಡಿಕೊಳ್ಳುವುದು.
3. ಎಲ್ಲಾ ಮಕ್ಕಳ, ಶಾಲೆಯ ಸಮಸ್ಯೆಗಳ ಕುರಿತು ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಈ ಕ್ಲಬ್ ನ ಮುಖಾಂತರ ಚರ್ಚಿಸಿ, ತೀರ್ಮಾನ ಕೈಗೊಂಡು ಕಾರ್ಯಗತ ಗೊಳಿಸುವುದು.
4. ಸಂಪೂರ್ಣ ಹಾಜರಾತಿ ಶಾಲೆಯನ್ನಾಗಿ ಮಾಡುವುದು ಅದಕ್ಕೆ ಪೂರಕವಾದ ಎಲ್ಲಾ ಚಟುವಟಿಕೆಯನ್ನು ಕ್ಲಬ್ ನ ಮುಖಾಂತರ ಶಾಲೆಯಲ್ಲಿ ಹಮ್ಮಿಕೊಳ್ಳುವುದು.
5. ಸಲಹಾ ಪೆಟ್ಟಿಗೆ ಕ್ರೀಯಾಶೀಲವಾಗಿರುವಂತೆ ನೋಡಿಕೊಳ್ಳುವುದು.
6. ಮಕ್ಕಳಿಗೆ ಮತ್ತು ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ವ್ಯವಸ್ಥೆಗಳ ಪ್ರಚಾರ ಮತ್ತು ಶಾಲಾ ವ್ಯಾಪ್ತಿಯಲ್ಲಿ ಬಾಲಕಾರ್ಮಿಕತೆ, ಬಾಲ್ಯ ವಿವಾಹ ಮತ್ತು ಮಕ್ಕಳ ಸಾಗಣಿಕೆ ಹಾಗೂ ಮಾರಾಟ ಪ್ರಕರಣ ಕಂಡಾಗ ಕ್ಲಬ್‌ನ ವತಿಯಿಂದ ಸಂಬಂಧಿಸಿದ ಇಲಾಖೆಗಳಿಗೆ ದೂರು ಸಲ್ಲಿಸುವುದು.
7. ಮಕ್ಕಳ ಹಕ್ಕುಗಳ ಕುರಿತಾಗಿ, ಮಕ್ಕಳ ಹಾಗೂ ಶಾಲಾ ಸಮಸ್ಯೆಗಳ ಬಗ್ಗೆ ಮಕ್ಕಳಿಂದ ಗೋಡೆ ಬರಹ, ಭಿತ್ತಿ ಪತ್ರಗಳನ್ನು ತಯಾರಿಸಿ ಶಾಲಾ ಅವರಣದಲ್ಲಿ, ಗ್ರಾಮ ಪಂಚಾಯತು ಹಾಗು ಸಮುದಾಯಗಳಲ್ಲಿ ಅವುಗಳನ್ನು ಬಳಸುವುದು.
8. ಸಣ್ಣ ಸಣ್ಣ ಅಧ್ಯಯನಗಳು, ನಿರಂತರ ಸಂವಾದ ಗೋಷ್ಠಿಗಳು, ಚರ್ಚಾಕೂಟಗಳು, ಶಿಕ್ಷಣದ ಬಗೆಗಿನ ಮತ್ತು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಸ್ಪರ್ದೆಗಳನ್ನು, ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸುವುದು.





9. ಶಾಲೆ ಮತ್ತು ಸಮುದಾಯದಲ್ಲಿ ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಹಬ್ಬಗಳನ್ನು ಈ ಕ್ಲಬ್ ನ ಮುಖಾಂತರ ಚರ್ಚಿಸಿ, ತೀರ್ಮಾನ ಕೈಗೊಂಡು ಕ್ಲಬ್‌ನ ನೇತೃತ್ವದಲ್ಲಿ ಆಚರಿಸುವುದು ಮತ್ತು ಶಾಲಾ ಉತ್ಸವದಲ್ಲಿ ಭಾಗವಹಿಸುವುದು.
10. ಪ್ರತಿ ತಿಂಗಳಿಗೊಮ್ಮೆ ಎಸ್.ಡಿ.ಎಮ್.ಸಿ ಸಭೆ ಆಗುವಂತೆ ನೋಡಿಕೊಳ್ಳುವುದು.
11. ಸ್ವಚ್ಚತೆ,ಆರೋಗ್ಯದ ಬಗೆಗಿನ ಮಾಹಿತಿ ಮತ್ತು ಶಾಲಾ ವಠಾರ ಸ್ವಚ್ಛವಾಗಿಡುವುದು.
12. ತಮ್ಮ ಶಾಲಾ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ, ಗ್ರಾಮ ಪಂಚಾಯತು, ಪೋಲೀಸು ಠಾಣೆ, ಮಹಿಳಾ ಸಂಘ, ಸ್ವ-ಸಹಾಯ ಸಂಘ, ಯುವಕ ಸಂಘ ಗಳಿಗೆ ಭೇಟಿ ನೀಡಿ ಮಾಹಿತಿ ಪಡೆದು ಶಾಲಾ ಅಭಿವೃದ್ಧಿಗೆ ಸಹಭಾಗಿತ್ವ ಪಡೆಯುವುದು.
13. ಶಾಲಾ ಮಂತ್ರಿ ಮಂಡಲ ಸರಿಯಾಗಿರುವಂತೆ ಮತ್ತು ಲಿಂಗ ಸಮಾನತೆ ಹಾಗೂ ಪಾರದರ್ಶಕವಾಗಿರುವಂತೆ ನೋಡಿಕೊಳ್ಳುವುದು.
14. ಗ್ರಾಮ ಪಂಚಾಯತು ಮಟ್ಟದಲ್ಲಿ "ಮಕ್ಕಳ ಹಕ್ಕುಗಳ ಗ್ರಾಮ ಸಭೆ" ಹಾಗೂ ಇತರೆ ಎಲ್ಲಾ ಸಮಿತಿಗಳ ಸಭೆಗಳಲ್ಲಿ ಭಾಗವಹಿಸಿ, ಶಾಲೆಗೆ ಹಾಗೂ ಮಕ್ಕಳಿಗೆ ಬೇಕಾದ ಸೂಕ್ತ ಸೌಲಭ್ಯಗಳ ವ್ಯವಸ್ಥೆಗೆ ಬೇಡಿಕೆ ಸಲ್ಲಿಸಿ ಲಭ್ಯವಾಗುವಂತೆ ಮಾಡುವುದು
15. ಮಕ್ಕಳ ಸುರಕ್ಷತೆಗೆ ಸಂಬಂದಿಸಿದಂತೆ ಸರಕಾರದಿಂದ ಹೊರಡಿಸಲಾದ ಮಾರ್ಗದರ್ಶಿ ಸೂತ್ರಗಳನ್ನು ಸರಿಯಾಗಿ ಆಳವಡಿಸುವಂತೆ ಕ್ಲಬ್ ನೋಡಿಕೊಳ್ಳುವುದು. ಮಕ್ಕಳ ಸ್ನೇಹಿ ವಾತವರಣವಿರುವಂತೆ ನೋಡಿಕೊಳ್ಳುವುದು.

## ಮಕ್ಕಳಿಗಿರುವ ಹಕ್ಕುಗಳು :

ಮಕ್ಕಳ ಹಕ್ಕುಗಳ ಒಡಂಬಡಿಕೆ ಈಗ ಒಂದು ಅಂತರಾಷ್ಟ್ರೀಯ ಕಾನೂನು. ಮಕ್ಕಳ ಹಕ್ಕುಗಳಲ್ಲಿರುವ ಎಲ್ಲ ವಿಚಾರಗಳನ್ನು ಜಾರಿಗೊಳಿಸಲು ಕಷ್ಟ ಸಾಧ್ಯವೆಂದು ತಿಳಿದಿದ್ದರೂ ಭಾರತ ಸರ್ಕಾರ ಈ ಒಡಂಬಡಿಕೆಗೆ 1992ರಲ್ಲಿ ಸಹಿ ಹಾಕಿ ಒಪ್ಪಿಕೊಂಡಿದೆ. ಜಗತ್ತಿನ ಎಲ್ಲ ಮಕ್ಕಳಿಗೆ ವಿಶ್ವಸಂಸ್ಥೆಯು ನೀಡಿರುವ ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಪ್ರಮುಖವಾಗಿ ನಾಲ್ಕು ಹಕ್ಕುಗಳ ಗುಂಪುಗಳಿವೆ. ಅವುಗಳೆಂದರೆ.....


**ಬದುಕುವ ಹಕ್ಕು** : ಎಲ್ಲ ಮಕ್ಕಳಿಗೆ 'ಬದುಕುವ ಹಕ್ಕು' ಇದೆ. ಮಗು ಹುಟ್ಟುವ ಮೊದಲೇ ತಾಯಿಯ ಆರೈಕೆ, ಬೇಕಾದ ಔಷಧೋಪಚಾರ, ತೊಂದರೆ ಇಲ್ಲದ ಹೆರಿಗೆ, ಬೆಳೆಯುತ್ತಿರುವ ಮಕ್ಕಳಿಗೆ ಆರೋಗ್ಯ ಸೇವೆ, ಪೌಷ್ಠಿಕ ಆಹಾರ, ಪರಿಶುದ್ಧ ಗಾಳಿ, ನೀರು, ವಾತಾವರಣ ಸೂಕ್ತವಾದ ಸೌಲಭ್ಯಗಳಿರುವ ಮನೆ ಇತ್ಯಾದಿಗಳು ಎಲ್ಲ ಮಕ್ಕಳಿಗೆ ದೊರಕಿಸುವುದು ಆಯಾ ಸಮುದಾಯಗಳ ಕರ್ತವ್ಯ.

**ರಕ್ಷಣೆಯ ಹಕ್ಕು** : ಬದುಕುವ ಮಕ್ಕಳಿಗೆ ತೊಂದರೆ ತೊಡಕುಗಳಿಲ್ಲದೆ ಬೆಳೆಯಲು ಅವರು 'ರಕ್ಷಣೆಯ ಹಕ್ಕು' ಹೊಂದಲೇಬೇಕು. ಮಕ್ಕಳ ಮೇಲೆ ದೌರ್ಜನ್ಯ, ಹಿಂಸೆ, ಒತ್ತಡ ತಪ್ಪಿಸುವುದು ಇದರ ಉದ್ದೇಶ. ಮಕ್ಕಳಿಗೆ ಅವರ ಮನೆ ಅಥವಾ ಮನೆಯ ಹೊರಗೆ ಬದುಕಲು ಸುರಕ್ಷಿತ ಸಮಾಜದ ಅವಶ್ಯಕತೆ ಇದೆ. ಇಲ್ಲಿನ ಆಶಯ ಯಾವುದೇ ಮಗು ಒತ್ತಡದಡಿ ದುಡಿಯಬಾರದು. ಜೀತದಲ್ಲಿ ಸಿಲುಕಬಾರದು, ಮಾರಾಟದ ವಸ್ತುಗಳಾಗಬಾರದು..

**ಅಭಿವೃದ್ಧಿ ಹೊಂದುವ ಹಕ್ಕು** : ಮಗು ಹುಟ್ಟಿ ಬೆಳೆದರೆ ಸಾಲದು, ಮಾನಸಿಕ ಮತ್ತು ವ್ಯಕ್ತಿತ್ವ ವಿಕಸನದ ಅವಶ್ಯಕತೆಯೂ ಸಹ ಮಕ್ಕಳಿಗಿದೆ. ಮಕ್ಕಳಿಗೆ 'ಅಭಿವೃದ್ಧಿ ಹೊಂದುವ ಹಕ್ಕು' ಇದ್ದು, ಆ ದಿಶೆಯಲ್ಲಿ ಶಿಕ್ಷಣದ ಹಕ್ಕಿನ ಜೊತೆಯಲ್ಲಿ ಎಲ್ಲ ಮಕ್ಕಳಿಗೂ ವಿಶ್ರಾಂತಿ, ಮನೋರಂಜನೆ ಹೊಂದಲು ಸೂಕ್ತ ವ್ಯವಸ್ಥೆಗಳನ್ನು ಸಮುದಾಯಗಳು ನಿರ್ಮಾಣ ಮಾಡಬೇಕು. ಸಾಮಾಜಿಕ ಭದ್ರತೆಯನ್ನು ಮಕ್ಕಳಿಗೆ ಖಾತರಿಗೊಳಿಸುವುದೂ ಸಹ ಸ್ಥಳೀಯ ಸಂಸ್ಥೆಗಳು ಹಾಗೂ ಸರ್ಕಾರದ ಜವಾಬ್ದಾರಿಯಾಗಿದೆ.

4. **ಭಾಗವಹಿಸುವ ಹಕ್ಕು** : ತಮ್ಮ ಬಗ್ಗೆ ನಿರ್ಧಾರ ಕೈಗೊಳ್ಳಲು, ತಮ್ಮ ಕುರಿತು ಆಗುವ ಚರ್ಚೆ, ಚಿಂತನೆಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು, ಸಾಂಘಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅವಕಾಶ ಮಕ್ಕಳಿಗೆ ಸಿಗಲೇಬೇಕು. ಇಂತಹದನ್ನು ಮಕ್ಕಳ 'ಭಾಗವಹಿಸುವ ಹಕ್ಕು' ಎಂದು ಗುರ್ತಿಸಲಾಗಿದೆ.

# ಮಕ್ಕಳ ಹಕ್ಕುಗಳ ಕ್ಲಬ್



"ಇಂದಿನ ಮಕ್ಕಳು ಇಂದಿನ ಪ್ರಜೆಗಳೇ"

**ಮಗು ಸ್ನೇಹಿ ಶಾಲಾ ವಾತಾವರಣಕ್ಕೆ ಪೂರಕವಾಗಿ ಗುಣಾತ್ಮಕ ಶಿಕ್ಷಣ**

ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ಮಕ್ಕಳೇ ರಚಿಸಿ, ನಡೆಸುವ ಮಕ್ಕಳ ಸಮಿತಿಯೇ

**"ಮಕ್ಕಳ ಹಕ್ಕುಗಳ ಕ್ಲಬ್"**

**A HANDOUT ON CHILD RIGHT CLUB**

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ 2009 (ಆಗಸ್ಟ್ 26, 2009)ರ ಪ್ರಕಾರ 6-14 ವರ್ಷದೊಳಗಿನ ಎಲ್ಲಾ ಮಕ್ಕಳು ಕಡ್ಡಾಯವಾಗಿ, ನಿರಂತರ ಶಾಲೆಗೆ ಹಾಜರಾಗಲೇ ಬೇಕು.

ಪ್ರಕಟನೆ : ಪಡಿ, 'ಗಣೇಶ', ನಿಯರ್ ಕುಲಾಸೊ ಆಸ್ಪತ್ರೆಯ ಬಳಿ,
2ನೇ ಅಡ್ಡರಸ್ತೆ, ಬೆಂದೂರ್‌ವೆಲ್, ಮಂಗಳೂರು-575 002.
ದೂರವಾಣಿ ಸಂಖ್ಯೆ : 0824 - 2439895

24 HOURS NATIONAL HELPLINE CHILD LINE 1098 NIGHT & DAY TOLL FREE

ಮಕ್ಕಳ ಹಕ್ಕುಗಳ ಕೋಶವು ಮಕ್ಕಳ ಹಕ್ಕುಗಳ ರಕ್ಷಣೆ, ಮಕ್ಕಳ ಸ್ನೇಹಿ ಶಾಲಾ ವಾತವರಣ ನಿರ್ಮಾಣ ಮಾಡಲು ಪ್ರತಿ ಶಾಲೆಗಳಲ್ಲಿ ಜಾರಿಗೊಳ್ಳಬೇಕಾದ ವ್ಯವಸ್ಥೆ. ಮಕ್ಕಳ ಹಕ್ಕುಗಳ ಕೋಶದ ಮೂಲಕ ಮಕ್ಕಳಲ್ಲಿ ಮತ್ತು ಸಮಾಜದಲ್ಲಿ ಮಕ್ಕಳ ಹಕ್ಕು, ಮಾನವ ಹಕ್ಕು, ಸಂವಿಧಾನದ ಬಗ್ಗೆ ತಿಳುವಳಿಕೆ ಮೂಡಿಸುವ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಒಬ್ಬ ಆರೋಗ್ಯವಂತ ಪ್ರಜ್ಞಾವಂತ ಪ್ರಜೆಯಾಗಿ ರೂಪಗೊಳ್ಳಲು ಸಹಕಾರಿಯಾಗುತ್ತದೆ.

ಎಲ್ಲಾ ಸರಕಾರಿ ಮತ್ತು ಖಾಸಗಿ
ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಲ್ಲಿ
"ಮಕ್ಕಳ ಹಕ್ಕುಗಳ ಕ್ಲಬ್" ನ ರಚನೆ

# "ಶಾಲೆಗೊಂದು ಮಕ್ಕಳ ಹಕ್ಕುಗಳ ಕ್ಲಬ್"

## ಗುರಿ

**"ಪ್ರತಿ ಶಾಲೆಯಲ್ಲಿ 100% ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯನ್ನು ಖಾತ್ರಿಪಡಿಸಿ ಶಾಲೆ ಮತ್ತು ಸಮುದಾಯವನ್ನು 'ಮಕ್ಕಳ ಸ್ನೇಹಿ'ಯನ್ನಾಗಿ ಪರಿವರ್ತಿಸಿ, ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಿ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಕಾರ್ಯನಿರ್ವಹಿಸುವುದು".**

ಸಂವಿಧಾನ ಅಧ್ಯಾಯ 4 ಲೇಖನ 21ಎ ಪ್ರಕಾರ 6-14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಶಿಕ್ಷಣ "ಮೂಲಭೂತ ಹಕ್ಕು". (ಸಂವಿಧಾನದ 93ನೇ ಮಸೂದೆ, 86ನೇ ತಿದ್ದುಪಡಿ - 2002)

## ಉದ್ದೇಶಗಳು

1. ಮಕ್ಕಳಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ರೂಡಿಸಿ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವುದರ ಜೊತೆಗೆ ಸಾಮಾಜಿಕ ಕಾಳಜಿಯನ್ನು ಬೆಳೆಸುವುದು.
2. ಸಂವಿಧಾನದ ಆಶಯದಂತೆ ಮತ್ತು ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ ಮಕ್ಕಳಿಗಿರುವ ಎಲ್ಲಾ ಹಕ್ಕುಗಳು ಬಗೆಗೆ ತಿಳಿದುಕೊಂಡು ಅವರು ತಮ್ಮ ಸಮುದಾಯದಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಮಕ್ಕಳ ಹಕ್ಕುಗಳ ಪರಿಣಾಮಕಾರಿ ಜಾರಿಗೆ ಒತ್ತು ನೀಡುವುದು.
3. ಮಕ್ಕಳಲ್ಲಿ ಶಿಕ್ಷಣದ ಮಹತ್ವದ ಬಗೆಗೆ ಜಾಗೃತಿ ಮೂಡಿಸಿ ತರಗತಿಗಳಿಗೆ ನಿರಂತರ ಹಾಜರಾಗುವುದರ ಜೊತೆಗೆ ಅವರು ಶಿಕ್ಷಣ ಮುಂದುವರೆಸುವಂತೆ ಪ್ರೇರೆಪಿಸುವುದು ಮತ್ತು ಮಕ್ಕಳು ಶಾಲೆ ಬಿಡುವುದನ್ನು ಸಂಪೂರ್ಣ ತಡೆಗಟ್ಟುವುದು.
4. ಪ್ರತಿ ಶಾಲೆಗಳಲ್ಲಿ ಎಲ್ಲಾ ಶಾಲಾ ಚಟುವಟಿಕೆಗಳನ್ನು ಮಕ್ಕಳ ಹಕ್ಕುಗಳ ಆಧಾರಿತವಾಗಿ ನಡೆಸುವುದು. ಮತ್ತು ಮಕ್ಕಳ ಹಕ್ಕುಗಳ ಮುಖಾಂತರವೇ ಶಾಲಾ ಚಟುವಟಿಕೆಗಳನ್ನು ರೂಪಿಸುವುದು.
5. ಮಕ್ಕಳಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು ಮತ್ತು ಮಕ್ಕಳಲ್ಲಿ ವೈಯಕ್ತಿಕ ಸ್ವಚ್ಛತೆ ಮತ್ತು ಪರಿಸರ ಸ್ವಚ್ಛತೆ ಕಾಪಾಡಲು ಪ್ರೇರೆಪಿಸುವುದು.
6. ಮಕ್ಕಳಲ್ಲಿ ಜಾತಿ, ಲಿಂಗ, ಮತ ಬೇಧ ಬಾರದಂತೆ ಪ್ರೇರೇಪಿಸುವುದು ಹಾಗೂ ಸಹಕಾರಿ ಮನೋಬಾವನೆಯನ್ನು ಬೆಳೆಸುವುದು.
7. .ಬಾಲ ಕಾರ್ಮಿಕ ಪದ್ದತಿ ಹಾಗೂ ಬಾಲ್ಯ ವಿವಾಹವನ್ನು ಸಂಪೂರ್ಣ ವಿರೋಧಿಸಿ, ಅದರ ನಿರ್ಮೂಲನೆಗೆ ಕಾರ್ಯಕ್ರಮ ರೂಪಿಸುವುದು.
8. ಎಲ್ಲಾ ಮಕ್ಕಳ ಸರ್ವತೋಮುಖ ಅಭಿವೃದ್ದಿಗೆ, ಜೀವನ ಕೌಶಲ್ಯವನ್ನು ಬೆಳೆಸುವುದು ಹಾಗೂ ಶಿಕ್ಷಣ, ಬಾಲ್ಯವನ್ನು ಕಾಪಾಡಲು ಮತ್ತು ಶಾಲೆಯ ಅಭಿವೃದ್ಧಿಗೆ ಸಮುದಾಯ, ಎಸ್.ಡಿ. ಎಮ್.ಸಿ, ಗ್ರಾಮ ಪಂಚಾಯತ್, ಪೋಷಕರು, ಶಾಲೆ ಮತ್ತು ಮಕ್ಕಳು ಎಲ್ಲಾ ಒಟ್ಟಾಗಿ ಒಂದೇ ವೇದಿಕೆಯಿಂದ ಯೋಜನೆಗಳನ್ನು ತಯಾರಿಸುವುದು.



## ಸ್ವರೂಪ

ಮಕ್ಕಳ ಕೋಶವು ಸಕ್ರೀಯವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯಾಚರಿಸಲು ಅನುವಾಗುವಂತೆ ಎರಡು ಹಂತದ ಸಮಿತಿಗಳನ್ನು ರೂಪಿಸುವುದು ಸೂಕ್ತ. ಒಂದು ನಿರ್ವಹಣಾ ಸಮಿತಿ, ಇನ್ನೊಂದು ಸಲಹಾ ಸಮಿತಿ.

**ನಿರ್ವಾಹಣಾ ಸಮಿತಿ** : ಕ್ಲಬ್‌ನ ಕಾರ್ಯ ಚಟುವಟಿಕೆಯನ್ನು ಯೋಜಿಸುವ ಮತ್ತು ಅನುಷ್ಟಾನಗೊಳಿಸುವ ಜವಾಬ್ದಾರಿ ಕೋಶದ ನಿರ್ವಾಹಣಾ ಸಮಿತಿಯದ್ದಾಗಿರುತ್ತದೆ. ನಿರ್ವಹಣಾ ಸಮಿತಿಯು ಸಂಪೂರ್ಣವಾಗಿ ಮಕ್ಕಳನ್ನೇ ಒಳಗೊಂಡಿರುತ್ತದೆ. ಪ್ರತಿ ತರಗತಿಯಿಂದ ಇಬ್ಬರು (ಒಂದು ಹುಡುಗ, ಒಂದು ಹುಡುಗಿ) ಪ್ರಜಾಪ್ರಭುತ್ವ ಮಾದರಿಯಲ್ಲಿ ಈ ಸಮಿತಿಯಲ್ಲಿ ಸದಸ್ಯರಾಗುತ್ತಾರೆ. ಸಮಿತಿಯ ಮೇಲ್ವಿಚಾರಕರಾಗಿ ಒಬ್ಬರು ಶಿಕ್ಷಕರು ಮತ್ತು ಎಸ್.ಡಿ.ಎಮ್,ಸಿ. ಸದಸ್ಯರು ಇರುತ್ತಾರೆ. ಇಲ್ಲಿ ಶಿಕ್ಷಕ ಪ್ರತಿನಿಧಿ ಪುರುಷರಾದರೆ, ಎಸ್.ಡಿ.ಎಮ್.ಸಿ. ಪ್ರತಿನಿಧಿಯಾಗಿ ಕಡ್ಡಾಯವಾಗಿ ಮಹಿಳಾ ಸದಸ್ಯೆಯನ್ನೇ ಮೇಲ್ವಿಚಾರಕರಾಗಿ ನೇಮಿಸಬೇಕು. ಈ ಇಬ್ಬರು ಅಗತ್ಯ ಸಲಹೆ ಸೂಚನೆಗಳನ್ನು ನೀಡುತ್ತಾ ಕ್ಲಬ್‌ನ ಕಾರ್ಯಚಟುವಟಿಕೆಗಳಿಗೂ ಮಾರ್ಗದರ್ಶಕರಾಗಿರುತ್ತಾರೆ. ಸಮಿತಿಯ ಎಲ್ಲಾ ಪದಾಧಿಕಾರಿಗಳೂ ಮಕ್ಕಳೇ ಆಗಿರುತ್ತಾರೆ ಮತ್ತು ಸಮಿತಿ ಪದಾಧಿಕಾರಿಗಳ ಆಯ್ಕೆಯನ್ನು ಮಕ್ಕಳ ಪ್ರತಿನಿಧಿಗಳೇ ಮತದಾನದ ಮೂಲಕ ಮಾಡಬೇಕು. ಸಮಿತಿಯ ಅವಧಿಯು ಒಂದು ವರ್ಷದಾಗಿರುತ್ತದೆ ಮತ್ತು ಪ್ರತಿವರ್ಷವು ನವೀಕರಣಗೊಳ್ಳಬೇಕು.

**ಸಲಹಾ ಸಮಿತಿ**: ಸಲಹಾ ಸಮಿತಿಯು ಪದನಿಮಿತ್ತವಾಗಿದ್ದು ಸಲಹಾ ಸಮಿತಿಯ ನೇತೃತವವನ್ನು ಎಸ್.ಡಿ.ಎಮ್.ಸಿ ಅಧ್ಯಕ್ಷರು ವಹಿಸುವರು ಮತ್ತು ಸಮಿತಿಯ ಕಾರ್ಯದರ್ಶಿಯಾಗಿ ಕೋಶದ ಮೇಲ್ವಿಚಾರಕ ಜವಬದಾರಿಯನ್ನು ಹೊಂದಿದ ಶಿಕ್ಷಕರು ಕಾರ್ಯ ನಿರ್ವಹಿಸುವರು. ಸಲಹಾ ಸಮಿತಿ ಕ್ಲಬ್‌ನ ಒಟ್ಟು ಕಾರ್ಯಚಟುವಟಿಕೆಯನ್ನು ಮೆಲುಸ್ತುವಾರಿ ನೋಡಿಕೊಳ್ಳುತ್ತದೆ.ಕೋಶದ ಕಾರ್ಯಚಟುವಟಿಕೆಗಳನ್ನು ಪರಿಶಿಲಿಸುವುದು, ನಿರ್ವಹಣಾ ಸಮಿತಿ ಮಂಡಿಸಿದ ಕಾರ್ಯಯೋಜನೆ ಮತ್ತು ಆಯವ್ಯಯಗಳ ಬಗೆಗೆ ಚರ್ಚಿಸಿ ಅನುಮೋದನೆ ಮತ್ತು ಮಾರ್ಗದರ್ಶನ ನೀಡುವುದು.

## ಕ್ಲಬ್ ರಚಿಸುವ ವಿಧಾನ /ಕರ್ತವ್ಯಗಳು

1. ಪ್ರಾರಂಭದಲ್ಲಿ ಶಾಲಾ ಮತ್ತು ಸಮುದಾಯ ಮಟ್ಟದಲ್ಲಿ ಅರಿವಿನ ಕಾರ್ಯಕ್ರಮ ನಡೆಸಿ ಮಕ್ಕಳ, ಸಮುದಾಯದ ಒಪ್ಪಿಗೆ ಪಡೆದು ಕ್ಲಬ್‌ನ ಅಗತ್ಯ, ಉಪಯೋಗವನ್ನು ಅರ್ಥಮಾಡಿಕೊಂಡು ಕ್ಲಬ್‌ನ ರಚನೆಗೆ ಮುಂದಾಗುವುದು.
2. ಎಲ್ಲಾ ಸಭೆಗಳನ್ನು ಮಕ್ಕಳೇ ನಡೆಸುತ್ತಾರೆ. ಶಿಕ್ಷಕರು, ಎಸ್.ಡಿ.ಎಮ್.ಸಿ ಸದಸ್ಯರು ಮತ್ತು ಪೋಷಕರು ಪ್ರೋತ್ಸಾಹಕ ಸದಸ್ಯರಾಗಿರುತ್ತಾರೆ.
3. ಪ್ರತಿ ಸಭೆಯ ನಡವಳಿಕೆಯನ್ನು ಮಕ್ಕಳೇ ನಡೆಸುತ್ತಾರೆ ಮತ್ತು ನಡವಳಿಕೆಯ ಪುಸ್ತಕವನ್ನು ಮುಖ್ಯೋಪಾಧ್ಯಾಯರ ಕಛೇರಿಯಲ್ಲಿ ಇಡುವುದು.
4. ಕ್ಲಬ್‌ನ ಸಮಿತಿ ಸದಸ್ಯರು ಪ್ರತಿ ತಿಂಗಳು ಸಭೆ ಸೇರಿ ಪ್ರತಿ ತಿಂಗಳ ಕಾರ್ಯಕ್ರಮದ ಬಗ್ಗೆ ಚರ್ಚೆ ತಿಂಗಳ ಯೋಜನೆ ತಯಾರಿಸಿ ಕಾರ್ಯಕ್ರಮ ನಡೆಸಬೇಕು.
5. ವರ್ಷಕ್ಕೆ 3 ಸಾಮಾನ್ಯ ಸಭೆಯನ್ನು ನಡೆಸಬೇಕು ಆದರಲ್ಲಿ ಅದರಲ್ಲೂ ಎಲ್ಲಾ ಮಕ್ಕಳು, ಶಿಕ್ಷಕರು, ಪೋಷಕರು, ಎಸ್.ಡಿ.ಎಮ್.ಸಿ ಸದಸ್ಯರು ಭಾಗವಹಿಸುವರು. ಸಭೆಯಲ್ಲಿ ವರದಿ ಮಂಢನೆ, ಮುಂದಿನ ಯೋಜನೆ ತಯಾರಿಸುವುದು.
6. ಪ್ರತಿ ತಿಂಗಳು ಕ್ಲಬ್ ನ ಮುಖಾಂತರ ಒಂದು ಕಾರ್ಯಕ್ರಮ ಹಮ್ಮಿಕೊಳ್ಳುವುದು.

